# ಯಾವುದು ಸತ್ಯ?

ಸತ್ಯಸ್ಯ ಸತ್ಯದಂತೆ ನಮ್ಮ ಕಣ್ಮುಂದೆ ಕಾಣುತ್ತಿರುವ ಜಗತ್ತು ಸ್ವಪ್ನದಷ್ಟೇ ಸತ್ಯ ಎಂದು ಈ ಕಥೆ ಸೂಚಿಸುತ್ತದೆ. 'ಬದುಕಲು ಕಲಿಯಿರಿ' ಪುಸ್ತಕದಿಂದ ಹಾಗೂ ತಮ್ಮ ವಾಗ್ಮಿತ್ವದಿಂದ ಪ್ರಖ್ಯಾತವಾಗಿರುವ ಸ್ವಾಮಿ ಜಗದಾತ್ಮಾನಂದಜಿಯವರು ಈಗ ಪೊನ್ನಂಪೇಟೆಯ ರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾಗಿರುವರು.

ಸ್ವಾಮಿ ಜಗದಾತ್ಮಾನಂದ

ಮಿಥಿಲೆಯ ರಾಜಧಾನಿಯನ್ನು ಶತ್ರುರಾಜ್ಯದ ದೊರೆ ಆಕ್ರಮಣ ಮಾಡಿದ. ಆತನ ಅಪಾರ ಸೇನೆಯು ನಗರವನ್ನು ಸಂಪೂರ್ಣವಾಗಿ ಮುತ್ತಿಬಿಟ್ಟಿತ್ತು. ಯುದ್ಧ ಪ್ರಾರಂಭವಾಯಿತು. ಮಿಥಿಲೆಯ ಸೇನೆಯು ಕೂಡಲೇ ಯುದ್ಧಕ್ಕೆ ಸನ್ನದ್ಧವಾಗಿ ಶತ್ರುಸೇನೆಯು ಮುಂದುವರಿಯದಂತೆ ತಡೆಹಾಕಿತ್ತು. ಆದರೆ ವಿಜಯವು ಶತ್ರು ಪಕ್ಷಕ್ಕೇ ಲಭ್ಯವಾಗುವಂತೆ ಕಂಡುಬಂದಿತು. ಮಿಥಿಲೆಯ ಸೇನೆಯು ಸೋಲೊಪ್ಪಬೇಕಾಯಿತು. ಮಹಾರಾಜನಾದ ಜನಕನು ಪರಾಜಿತನಾದನು. ವಿಜಯಿಯಾದ ಶತ್ರುವು ಆಜ್ಞೆಮಾಡಿದ : 'ನಾನು ನಿನ್ನನ್ನು ಕೊಲ್ಲುವುದಿಲ್ಲ. ಆದರೆ ಇದು ನನ್ನ ಆಜ್ಞೆ. ನಿನ್ನ ವಸ್ತ್ರ ಅಲಂಕಾರಗಳನ್ನೆಲ್ಲ ಇಲ್ಲಿಯೇ ಬಿಟ್ಟು, ಈ ರಾಜ್ಯದಿಂದ ಹೊರಗೆ ಹೊರಟುಹೋಗು.'

ರಾಜನಾದ ಜನಕನು ತನ್ನ ರಾಜಸಹಜ ಘನಗಾಂಭೀರ್ಯ ಸೂಚಿಸುವ ಬೆಲೆಬಾಳುವ ಆಭರಣಗಳನ್ನೂ ವಸ್ತ್ರಗಳನ್ನೂ ಬಿಚ್ಚಿಟ್ಟು ಒಂದು ಕೌಪೀನವನ್ನು ಮಾತ್ರ ಉಟ್ಟು ಅರಮನೆಯನ್ನು ಬಿಟ್ಟು ಬರಿಗಾಲಿನಲ್ಲಿ ದಾರಿ ನಡೆಯತೊಡಗಿದ. ಯಾರಾದರೊಬ್ಬ ನಾಗರಿಕನಲ್ಲಿ ಆಶ್ರಯಪಡೆಯುತ್ತೇನೆಂದುಕೊಂಡ. ರಸ್ತೆಯಲ್ಲಿ ಏಕಾಂಗಿಯೂ ದುಃಖಿತನೂ ಆಗಿ ಮುನ್ನಡೆಯಲು ಪ್ರಾರಂಭಿಸಿದಾಗಲೇ ರಾಜಾಜ್ಞೆಯ ಮತ್ತೊಂದು ಡಂಗುರ ಕೇಳಿಸಿತು : 'ಹೊರದೂಡಲ್ಪಟ್ಟ ರಾಜನಿಗೆ ಯಾರಾದರೂ ಅನ್ನ ಆಶ್ರಯ ನೀಡಿದರೆ ಆತನ ಶಿರಚ್ಛೇದನವಾಗುವುದು, ಜೋಕೆ! ಯಾರೂ ಆತನಿಗೆ ಕುಡಿಯಲು ನೀರೂ ಕೊಡಕೂಡದು.'

ಜನಕನು ಈಗ ರಾಜನಲ್ಲ, ಭಿಕ್ಷುಕ. ರಾಜ್ಯದ ಹೊರಗಡೆ ಬೇರೆಯೇ ಆದ ಒಂದು ರಾಜ್ಯದ ಊರನ್ನು ಪ್ರವೇಶಿಸಿದ. ಅನೇಕ ದಿನಗಳಿಂದ ಹೊಟ್ಟೆಗಿರಲಿಲ್ಲ. ಅಲ್ಲಿನ ಒಂದು ಅನ್ನದಾನ ಸತ್ರದವರು ಬಾಗಿಲು ಮುಚ್ಚಲು ಪ್ರಾರಂಭಿಸಿದ್ದರು. ಕಾರಣ ಆ ದಿನದ ಅನ್ನಾಹಾರವೆಲ್ಲ ಮುಗಿದಿತ್ತು. ಅತ್ಯಂತ ದೀನನಾಗಿ 'ಒಂದು ತುತ್ತು ಅನ್ನ ನೀಡಿ' ಎಂದು ಅಲ್ಲಿನ ಅಧಿಕಾರಿಗಳನ್ನು ಅಂಗಲಾಚಿದ. ಅನ್ನಕ್ಷೇತ್ರದ ಅಧಿಕಾರಿ ಸ್ವಲ್ಪಮಾತ್ರ ಉಳಿದಿದ್ದ ಅನ್ನ ತರಕಾರಿ ಮಿಶ್ರಿತ ಕಿಚಡಿಯನ್ನು ಅವನ ಕೈಯಲ್ಲಿತ್ತ. ಜನಕನ ಸಂತೋಷಕ್ಕೆ ಪಾರವಿರಲಿಲ್ಲ. ಅತ್ಯಂತ ಹಸಿದಿದ್ದ ಆತ ಆ ಕಿಚಡಿಯನ್ನು ಬಾಯಿಯಲ್ಲಿಡಬೇಕೆನ್ನುವ ಹೊತ್ತಿಗೆ ಎಲ್ಲಿಂದಲೋ ಒಂದು ಗಿಡುಗ ಥಟ್ಟನೆ ಹಾರಿಬಂದು ಅವನ ಕೈಯ ಮೇಲೆರಗಿತು. ಆಹಾರವೆಲ್ಲ ಧೂಳಿನಲ್ಲಿ ಸೇರಿಕೊಂಡಿತು.

'ಅಯ್ಯೋ ದೇವರೇ! ಇದೆಂಥ ದುಃಸ್ಥಿತಿ ಬಂತಪ್ಪಾ!' ಎಂದು ಜನಕ ಗಟ್ಟಿಯಾಗಿ ಕಿರಿಚಿಕೊಂಡಾಗಲೇ ಅವನ ಸ್ವಪ್ನ ಭಂಗವಾಯಿತು. ಆದರೆ ಶರೀರದಲ್ಲಿ ಬೆವರು, ಆಯಾಸ, ಬಳಲಿಕೆ ಇನ್ನೂ ಕಾಣುತ್ತಿದೆ. ಹತ್ತಿರದಲ್ಲೇ ಇದ್ದ ರಾಣಿಯರು ಆ ಬಳಿಕ ಸೇವಕರು ರಾಜನ ಸುತ್ತಮುತ್ತ ಅವನ ಕೂಗನ್ನು ಕೇಳಿ ಸುತ್ತುವರಿದಿದ್ದಾರೆ. ಅವನು ಕಣ್ಣುಬಿಟ್ಟು ಸುತ್ತಮುತ್ತ ನೋಡತೊಡಗಿದ. ಅದೇ ಸುಸಜ್ಜಿತವಾದ ಶಯನ ಕಕ್ಷೆ, ಅತ್ಯಂತ ಮೃದುವಾದ ಹಾಸಿಗೆ, ರಾಣಿಯರು ಸೇವಕರು ಆಶ್ಚರ್ಯಚಕಿತರಾಗಿ ಹತಪ್ರಭರಾಗಿ ಅವನನ್ನೇ ನೋಡುತ್ತಾ ನಿಂತಿದ್ದಾರೆ, 'ಅಯ್ಯೋ! ಏನಾಯಿತಪ್ಪಾ ಇವರಿಗೆ?'

ಸ್ವಪ್ನದ ಪ್ರಭಾವ ಎಷ್ಟೊಂದು ಪ್ರಬಲವಾಗಿತ್ತೆಂದರೆ ತನ್ನ ಎದುರು ಬಂದವರೆಲ್ಲರೊಡನೆ ರಾಜನು ಕೇಳುತ್ತಿದ್ದಾನೆ, 'ಇದು ಸತ್ಯವೇ? ಅದು ಸತ್ಯವೇ? ಆಗ ಕಂಡದ್ದು ಸತ್ಯವೇ? ಈಗ ಕಾಣುತ್ತಿರುವುದು ಸತ್ಯವೇ? ಯೋಗಿರಾಜ ಅಷ್ಟಾವಕ್ರರೊಡನೆ ಜನಕನು ಇದೇ ಪ್ರಶ್ನೆಯನ್ನು ಕೇಳಿದನು. ಅಷ್ಟಾವಕ್ರನು ಯೋಗಬಲದಿಂದ ಈ ಪ್ರಶ್ನೆಯ ಮೂಲವನ್ನು ತಿಳಿದುಕೊಂಡು ಮರುಪ್ರಶ್ನೆ ಮಾಡಿದನು : 'ಮಹಾರಾಜ, ತಾವು ಒಂದು ಕೌಪೀನವನ್ನು ಮಾತ್ರ ಧರಿಸಿ ಅನ್ನದಾನ ಛತ್ರದಲ್ಲಿ ಭಿಕ್ಷುಕನಾಗಿದ್ದುಕೊಂಡು ಎರಡೂ ಕೈಗಳನ್ನು ಚಾಚುತ್ತಾ ನಿಂತಿದ್ದಿರಷ್ಟೆ. ಆ ಸಮಯದಲ್ಲಿ ಈ ರಾಜಭವನ, ನಿಮ್ಮ ರಾಜವೇಷ, ಈ ರಾಣಿಯರು, ಮಂತ್ರಿಯರು ಹಾಗೂ ಸೇವಕ ಸೇವಕಿಯರು—ಇವರಲ್ಲಿ ಯಾರಾದರೂ ನಿಮ್ಮ ಜೊತೆಗಿದ್ದರೇ?' ಜನಕ ಉತ್ತರಿಸಿದ : 'ಆ ಸಮಯದಲ್ಲಿ ಯಾರೊಬ್ಬರೂ ನನ್ನ ಜೊತೆಗಿರಲಿಲ್ಲ, ಯೋಗಿವರ್ಯ. ಆ ವಿಪತ್ತಿನ ಸಮಯದಲ್ಲಿ ಏಕಾಂಗಿಯಾಗಿಯೇ ಇದ್ದೆ. ಏಕಾಂಗಿಯಾಗಿಯೇ ದುಃಖವನ್ನು ಸಹಿಸಿದೆ.' ಅಷ್ಟಾವಕ್ರರು ಪ್ರಶ್ನಿಸಿದರು : 'ಓ ರಾಜೇಂದ್ರ! ಎಚ್ಚೆತ್ತಮೇಲೆ ಈ ರಾಜವೇಷದಲ್ಲಿ ರಾಜಭವನದ ಅಂತಃಪುರದಲ್ಲಿ ಸ್ವರ್ಣರತ್ನ ಖಚಿತವಾದ ಹಾಸಿಗೆಯಲ್ಲಿ ಆಸೀನರಾಗಿರುವಾಗ ಆ ಅನ್ನಕ್ಷೇತ್ರ, ಅದರ ಅಧಿಕಾರಿ, ನೌಕರಿವರ್ಗ, ನಿನ್ನ ಭಿಕ್ಷಾವೇಷ, ಸಿಕ್ಕಿದ ಅಳಿದುಳಿದ ಆಹಾರ—ಅವುಗಳಲ್ಲಿ ಯಾವುದಾದರೂ ನಿನ್ನಲ್ಲಿ ಇರುವುವೇ?' 'ಸ್ವಲ್ಪವೂ ಇಲ್ಲ ಮಹಾತ್ಮರೇ, ನನ್ನ ಹತ್ತಿರ ಯಾವುದೂ ಇಲ್ಲ.' ಅಷ್ಟಾವಕ್ರರೆಂದರು: 'ಆದರೆ ಈ ಎರಡೂ ಅವಸ್ಥೆಗಳಲ್ಲಿ ನೀನು ಇದ್ದಿದ್ದಿ ತಾನೇ?' 'ಹೌದು' ಎಂದು ಜನಕನು ಒಪ್ಪಿಕೊಂಡ ಬಳಿಕ ಅಷ್ಟಾವಕ್ರರೆಂದರು: 'ಯಾವುದು ಕ್ಷಣಿಕ ಕಾಲದ ಅಧೀನವಾಗಿತ್ತೋ ಅದು ಸತ್ಯವಲ್ಲ. ಸತ್ಯವಾಗಲು ಸಾಧ್ಯವಿಲ್ಲ. ಇದು ಕೂಡ ಸತ್ಯವಲ್ಲ. ಎಲ್ಲ ಅವಸ್ಥೆಗಳೂ ಹಾಗೆಯೆ. ಆದರೆ ಈ ಅವಸ್ಥೆಗಳಿಂದ ಆಚೆಗೆ ಯಾವ ಆತ್ಮತತ್ತ್ವವು ಸಹಚಾರಿಯಾಗಿ ಸರ್ವದಾ ಸಾಕ್ಷಿಯಾಗಿದ್ದುಕೊಂಡಿತ್ತೋ ಅದು ಮಾತ್ರ ಸತ್ಯ. ಆದುದರಿಂದ ರಾಜನೆ, ಆ ಸತ್ಯವನ್ನು ತಿಳಿದುಕೊಳ್ಳಬೇಕು, ಮನನ ಮಾಡಿ ಸರಿಯಾಗಿ ಗ್ರಹಿಸಿಕೊಳ್ಳಬೇಕು.'

ಜನಕನು ಅನಾಸಕ್ತ ಭಾವದಿಂದ ತನ್ನ ಕರ್ತವ್ಯಗಳನ್ನು ಪೂರ್ಣ ರೀತಿಯಿಂದ ಪೂರೈಸುತ್ತ ಆತ್ಮದೇವನ ಆರಾಧನೆಯಲ್ಲಿ ತನ್ನನ್ನೇ ತೊಡಗಿಸಿಕೊಂಡ. (ಪಿಎಬಿಬಿವಿ)

ಒಮ್ಮೆ ನಾನು, ಅಂದರೆ ಚುಆಂಗ್‌ಟ್ಸು, ಕನಸಿನಲ್ಲಿ ಬಣ್ಣದ ಚಿಟ್ಟೆಯಾಗಿದ್ದೆನು. ರೆಕ್ಕೆಯನ್ನು ಆಡಿಸುತ್ತ ಸುತ್ತ ಹಾರಾಡುತ್ತಿದ್ದೆ. ನಾನು ಚಿಟ್ಟೆಯೆಂದೇ ಭಾವಿಸಿದ್ದೆ, ನಾನು ಮನುಷ್ಯ ಎಂಬುದನ್ನು ಮರೆತೇಬಿಟ್ಟಿದ್ದೆ. ಕೂಡಲೇ ಎಚ್ಚರವಾಯಿತು. ಹಾಸಿಗೆಯ ಮೇಲೆ ಮಲಗಿಕೊಂಡಿದ್ದೆ. ಈಗ ನಾನು ಚಿಟ್ಟೆಯೆಂದು ಕನಸು ಕಂಡ ಮನುಷ್ಯನೆ ಅಥವಾ ಮನುಷ್ಯನೆಂದು ಕನಸು ಕಾಣುತ್ತಿರುವ ಚಿಟ್ಟೆಯೆ ಎಂದು ಆಶ್ಚರ್ಯವಾಗುತ್ತಿದೆ.

—ಚುಆಂಗ್ ಟ್ಸು (ಚೈನಾದ ತತ್ತ್ವಜ್ಞಾನಿ ಮತ್ತು ಅನುಭಾವಿ)